ಮಾತಿನ ನಡುವೆ ಹೇಳಿದಾಗ ಕುಪ್ಪಣ್ಣಯ್ಯ 'ಹೌದು ಮಾರಾಯರೇ, ಅವರು ಈ ಕಾಲದವರಲ್ಲ' ಎಂದಿದ್ದರು. ಅದು ನಿಧಾನವಾಗಿ ಒಬ್ಬರಿಂದ ಒಬ್ಬರಿಗೆ ಹಬ್ಬಿ 'ಎಂಥ ಮಾಸ್ತ್ರಪ್ಪ ಅವರು!' ಎಂದು ಜನರ ಮೆಚ್ಚುಗೆಗೂ, ವ್ಯಂಗ್ಯಕ್ಕೂ ಅವರು ಒಳಗಾಗಿದ್ದರು.

ರಿಕ್ಷಾ ವಿಜಯ ಊರಲ್ಲಿಲ್ಲ ಎಂದು ತಿಳಿದು ಮಾಸ್ತ್ರು ಹೆಂಡತಿಗೆ 'ಸರಿ ನೀನು ಏನು ಮಾಡುತ್ತಿಯೋ ಮಾಡು' ಎಂದರು. ನೀಲಮ್ಮ ಐದು ಲೀಟರ್ ಹಾಲನ್ನು ಪ್ರಯಾಸದಲ್ಲಿ ಸೀತಾಪುರದ 'ಡೈರಿ'ಗೆ ಎತ್ತಿಕೊಂಡು ಹೋದರು. ಅವರು ವಾಪಾಸು ಬರುವ ತನಕ 'ಫರಂಗಿ ಮಣೆ'ಯ (ಮಕ್ಕಳಿಗೆ ಕಠಿಣ ಶಿಕ್ಷೆ ನೀಡುವ ವಿಧಾನ) ಮೇಲೆ ಕುಳಿತ ಹಾಗೆ ಅಥವಾ ಬಿತ್ತಿದ ಗದ್ದೆಯ ನಡುವೆ ಮೀನು ಹಿಡಿಯಲು ಕುಳಿತ ಕೊಕ್ಕರೆಯ ಹಾಗೆ ಆತಂಕದಿಂದ ಕುಳಿತ ಮಾಸ್ತ್ರು ಡೈರಿಯಿಂದ ಏದುಸಿರು ಬಿಡುತ್ತಾ ಬಂದ ಹೆಂಡತಿಯನ್ನು ನೋಡಿ ದೊಡ್ಡ ನಿಟ್ಟುಸಿರು ಬಿಟ್ಟು 'ಇದು ದೊಡ್ಡ ಕಷ್ಟಕ್ಕೆ ಇಟ್ಟುಕೊಂಡಿತಲ್ಲ ಮಾರಾಯ್ತಿ' ಎಂದು ನಲುಗಿದರು.

ನೀಲಮ್ಮ 'ನೀವು ನಿಶ್ಚಿಂತರಾಗಿರಿ' ಎಂದು ಗಂಡನನ್ನು ಸಮಜಾಯಿಷಿ ಜೀರಿಗೆ ಹಾಕಿದ ಹರಳು ಬೇರಿನ ಕಷಾಯ ಮಾಡಿಕೊಟ್ಟು 'ಸಂಜೆಗೆ ಗುಣ ಕಾಣದಿದ್ದರೆ ಸೀತಾಪುರದ ಡಾ. ಮೋಹನರಾಯರನ್ನು ಕರೆಸೋಣ' ಎಂದರು.

ಸಂಜೆ ಬಂದ ಡಾ. ಮೋಹನರಾಯರು ದುಗ್ಗೋಜಿ ಮಾಸ್ತರನ್ನು ಪರೀಕ್ಷಿಸಿ 'ನಿಮಗೆ ಡಿಸ್ಕಿನ ತೊಂದರೆ ಇದೆ ಮಾಸ್ಟ್ರೆ. ಇದು ಇಂಜೆಕ್ಷನ್ ಮತ್ತು ಮಾತ್ರೆಗಳಲ್ಲಿ ಗುಣವಾಗುವುದಲ್ಲ. ನೀವು ಇನ್ನು ಹಾಲು ಹಿಂಡಲು ಕುಕ್ಕುರುಕಾಲಲ್ಲಿ ಕುಳಿತುಕೊಳ್ಳುವ ಹಾಗಿಲ್ಲ. ಹಾಗೇ ಐದು ಲೀಟರ್ ಹಾಲನ್ನು ಎತ್ತಿಕೊಂಡು ದೂರ ನಡೆದು ಹೋಗುವ ಹಾಗೂ ಇಲ್ಲ. ಏನಿದ್ದರೂ ಈ ಕೆಲಸವು ನಿಮ್ಮ ಶ್ರೀಮತಿಗೇ ವಹಿಸಿಕೊಡಬೇಕು ಇಲ್ಲವೇ ದನಗಳನ್ನು ಮಾರಿ ಬಿಡಬೇಕು' ಎಂದರು.

ಸಾಮಾನ್ಯವಾಗಿ ಎಂದೂ ಎದೆಗುಂದದ ದುಗ್ಗೋಜಿ ಮಾಸ್ತ್ರು ಆ ದಿನ ತುಸು ಎದೆಗುಂದಿ ಒಮ್ಮೆ ಹೆಂಡತಿಯ ಮುಖ ನೋಡಿದರು. ಆ ಮೇಲೆ ಡಾಕ್ಟ್ರ ಮುಖ ನೋಡಿ ದೊಡ್ಡ ನಿಟ್ಟುಸಿರು ಬಿಟ್ಟು ಮೌನವಾದರು.

ಮರುದಿನ ನೀಲಮ್ಮನೇ ಹಾಲು ಹಿಂಡಿ ಡೈರಿಗೆ ಹೋಗಿ ಬಂದರು. ಅವರು ಡೈರಿಗೆ ಹೋಗುವ ದಾರಿಯಲ್ಲಿ ಅಬೂಬಕ್ಕರ್‌ನ ಅಂಗಳ ದಾಟಿ ಹೋಗಬೇಕಿತ್ತು. ಎರಡು ದಿನಗಳಿಂದ ನೀಲಮ್ಮನೇ ಹಾಲು ಕೊಂಡೊಯ್ಯುವುದನ್ನು ನೋಡಿದ ಅಬೂಬಕ್ಕರ್ ಮರುದಿನ ಬೆಳಗ್ಗೆ ಎದ್ದವನೇ ಮಾಸ್ತ್ರ ಮನೆಗೆ ಬಂದು ಕುರ್ಚಿಯಲ್ಲಿ 'ಬೆಪ್ಪು ತಕ್ಕಡಿ'ಯಂತೆ ಕುಳಿತಿದ್ದ ಮಾಸ್ತ್ರಿಗೆ 'ಸಲಾಮುಲೇಕುಂ' ಎಂದು ನಮಸ್ಕರಿಸಿ ಮಾತಿಗೆ ಮುಂದಾದ.

ಮಾಸ್ತ್ರು ದರ್ಕಾಸ್ತು ಮಾಡಿ ಮನೆ ಕಟ್ಟಿದಂದಿನಿಂದ ಅಬೂಬಕ್ಕರ್ ಅವರಿಗೆ ಪರಿಚಿತ. ಆತ ತೀರಾ ಬಡವ. ಮೀನು ವ್ಯಾಪಾರ ಮಾಡಿ ಏಳು ಮಕ್ಕಳಿರುವ ಸಂಸಾರವನ್ನು ಸರಿತೂಗಿಸುತ್ತಿದ್ದ. ಅವನ ಏಳು ಮಕ್ಕಳೂ ದುಗ್ಗೋಜಿ ಮಾಸ್ತ್ರ ಶಿಷ್ಯರೇ. ಅಬೂಬಕ್ಕರ್ ಮನೆಯಂಗಳವನ್ನು ಹಾದು ದಿನಾ ಶಾಲೆಗೆ ಹೋಗಬೇಕು ಮತ್ತು ಮನೆಗೆ ಅದೇ ದಾರಿಯಲ್ಲಿ ಬರಲೂ ಬೇಕು. ಹಾಗಾಗಿ ದಿನನಿತ್ಯ ಅಬೂಬಕ್ಕರ್‌ನ ಒಂದು ನಮಸ್ಕಾರ ಮಾಸ್ತ್ರಿಗೆ ಸಿಗುತ್ತಿತ್ತು. ಮಾಸ್ತ್ರೂ ಮಕ್ಕಳನ್ನು ಪ್ರೀತಿಯಿಂದಲೇ ಶಾಲೆಗೆ ಕರೆದುಕೊಂಡು ಹೋಗುತ್ತಿದ್ದರು ಮತ್ತು ಬರುತ್ತಿದ್ದರು.

ಅಬೂಬಕ್ಕರ್, ಮಾಸ್ತ್ರ ಬಾಯಿಂದ ಅವರ ಸಂಕಷ್ಟಗಳನ್ನು ಕೇಳಿ ಮೌನವಾದ. ಮಾಸ್ತ್ರು ಮೌನಮುರಿದು 'ಹೀಗಾದರೆ ನಾನು ರಾಸುಗಳನ್ನು ಮಾರಬೇಕಾಗುತ್ತದೆ. ನನಗೆ ನನ್ನ ಹೆಂಡತಿಯ ಕಷ್ಟ ನೋಡಲಾಗುವುದಿಲ್ಲ' ಎನ್ನುತ್ತಾ, 'ಎಲ್ಲಾ ದನಗಳನ್ನು ಮಾರಿ ಬಿಡುತ್ತೇನೆ, ಒಂದು ಗಿರಾಕಿ ಹುಡುಕಿ ಕೊಡಿ' ಎಂದರು.

ಅಬೂಬಕ್ಕರ್ ಮಾತನಾಡಲಿಲ್ಲ. ಆತ ಮಾಸ್ತ್ರು ಕುಳಿತಿದ್ದ ಕುರ್ಚಿಗೆ ಒರಗಿ ನಿಂತಿದ್ದ ನೀಲಮ್ಮವರನ್ನು ನೋಡಿದ. ನೀಲಮ್ಮ ತಟಕ್ಕನೆ 'ದನಗಳನ್ನು ಮಾರಬೇಕೋ ಬೇಡವೋ ಎನ್ನುವುದು ಇವರ ಒಬ್ಬರ ನಿರ್ಧಾರ ಆಗುವುದಿಲ್ಲ. ಸದ್ಯಕ್ಕಂತೂ ನಾನು ಇದನ್ನೆಲ್ಲ ನಿಭಾಯಿಸಬಲ್ಲೆ. ಎರಡೂ ದನಗಳು ಈಗ ಹಾಲು ಕಡಿಮೆ ಮಾಡಿವೆ. ಇನ್ನು ಮೂರು ನಾಲ್ಕು ತಿಂಗಳಲ್ಲಿ ಅವುಗಳ ಹಾಲು ಹಿಂಡುವುದು ನಿಲ್ಲುತ್ತದೆ. ಆ ತನಕ ಏನೂ ಬದಲಾವಣೆ ಬೇಡ' ಎಂದರು.

ಅಬೂಬಕ್ಕರ್ 'ಆಯ್ತು' ಎಂದ. ಆ ಮೇಲೆ ಎದ್ದು ನಿಂತು 'ಹಾಲಿನ ಕ್ಯಾನು ನನ್ನಲ್ಲಿ ಕೊಡಿ. ನಾನು ದಿನಾ ಹಾಲನ್ನು ಡೈರಿಗೆ ಹಾಕಿ ಬರುತ್ತೇನೆ. ಆದರೆ ನೀವು